ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ(ಸಮಾಜ ಕಲ್ಯಾಣ ಸಚಿವರು) :

ಅ) –ಹೌದು–

ಆ) ಕೊಳವೆ ಬಾವಿಯ ಘಟಕದ ವೆಚ್ಚ ರೂ. 65,000/– ಸಹಾಯಧನ ಮಿತಿಗಿಂತ ಹೆಚ್ಚಾಗುವ, ಪ್ರಕರಣಗಳಿಗೆ ವಿದ್ಯುದ್ದೀಕರಣಕ್ಕಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾದ ಠೇವಣಿ (CYMD/MSD) ಹಣವನ್ನು ಪಾವತಿಸಲು ಫಲಾನುಭವಿಗಳು ಅಶಕ್ತರಾಗಿರುವ ಕಾರಣ ಮತ್ತು ಹೆಚ್ಚುವರಿ ಮೊತ್ತಕ್ಕೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಣಕಾಸು ಅಭಿವೃದ್ಧಿ ನಿಗಮ, ಹೊಸದೆಹಲಿ ಇವರಿಂದ ಪಡೆದ ಅವಧಿಸಾಲಕ್ಕೆ ಪ್ರತಿ ಫಲಾನುಭವಿಗೆ ರೂ. 15,000/– ದಂತೆ ಅವಧಿಸಾಲ ಮಂಜೂರು ಮಾಡಲು ಅಗತ್ಯ ದಾಖಲಾತಿಗಳನ್ನು ನಿಗಮಕ್ಕೆ ನೀಡಿ ಸಾಲ ಮಂಜೂರು ಮಾಡಿಸಲು ವಿಳಂಬ ಮಾಡುತ್ತಿರುವ ಪ್ರಯುಕ್ತ ನಿಗದಿತ ಸಮಯದಲ್ಲಿ ಪಂಪ್‌ಸೆಟ್‌ಗಳನ್ನು ಕೊಳವೆಬಾವಿಗಳಿಗೆ ಅಳವಡಿಸಲು ಸಾಧ್ಯವಾಗುತ್ತಿಲ್ಲ.

ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾದ ಠೇವಣಿ (CYMD/MSD) ಹಣವನ್ನು ಸರ್ಕಾರದಿಂದಲೇ ಭರಿಸಿ ವಿದ್ಯುದ್ದೀಕರಣಕ್ಕೆ ಬಾಕಿ ಇರುವ ಎಲ್ಲಾ ಕೊಳವೆಬಾವಿಗಳಿಗೆ ವಿದ್ಯುದ್ದೀಕರಣಗೊಳಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಪಂಪ್‌ಸೆಟ್‌ಗಳನ್ನು ಅಳವಡಿಸಲು ಈಗಾಗಲೇ ಪಂಪ್‌ಸೆಟ್ ಸರಬರಾಜು ಕಂಪನಿಗಳಿಗೆ ಕಾರ್ಯದೇಶ ನೀಡಲಾಗಿರುತ್ತದೆ ಹಾಗೂ ಅವಧಿಸಾಲಕ್ಕೆ ಅಗತ್ಯ ದಾಖಲಾತಿಗಳನ್ನು ನಿಗಮಕ್ಕೆ ಸಲ್ಲಿಸಿ ಸಾಲ ಮಂಜೂರು ಮಾಡಿಸಿಕೊಳ್ಳುವಂತೆ ಫಲಾನುಭವಿಗಳ ಮನವೊಲಿಸಿ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗುತ್ತಿದೆ. ಅದರಂತೆ ಕಾರ್ಯ ಪ್ರಗತಿಯಲ್ಲಿದೆ.

581 (905) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ಕಾರ್ಯನಿರ್ವಹಿಸುತ್ತಿರುವ ಪಶುಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಆಸ್ಪತ್ರೆಗಳಲ್ಲಿ ವೈದ್ಯರಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಆಸ್ಪತ್ರೆಗಳಲ್ಲಿ ಸರಿಯಾದ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆಯೆ;

ಈ) ವೈದ್ಯ ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವು ನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) ರಾಜ್ಯದಲ್ಲಿ ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ವಿವಿಧ ದರ್ಜೆಯ ಒಟ್ಟು 3876 ಪಶುಚಿಕಿತ್ಸಾಲಯಗಳು ಹಾಗೂ ಪಶು ಆಸ್ಪತ್ರೆಗಳು ಇರುತ್ತವೆ. ಚಾಮರಾಜನಗರ ಜಿಲ್ಲೆಯಲ್ಲಿ 76 ವಿವಿಧ ದರ್ಜೆಯ ಪಶು ಚಿಕಿತ್ಸಾಲಯಗಳು ಮತ್ತು ಪಶು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ.

ಕ್ರ. ಸಂ.	ಪಶುವೈದ್ಯ ಸಂಸ್ಥೆಗಳು	ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಸಂಸ್ಥೆಗಳು	ಚಾಮರಾಜನಗರ ಜಿಲ್ಲೆಯಲ್ಲಿರುವ ಸಂಸ್ಥೆಗಳು
1	ಪಶು ಆಸ್ಪತ್ರೆ	295	7
2	ಪಶುಚಿಕಿತ್ಸಾಲಯಗಳು	1588	23
3	ಸಂಚಾರಿ ಪಶುಚಿಕಿತ್ಸಾಲಯಗಳು	175	4
4	ಪ್ರಾಥಮಿಕ ಪಶುಚಿಕಿತ್ಸಾಲಯಗಳು	1324	29
5	ಕೃತಕ ಗರ್ಭಧಾರಣಾ ಕೇಂದ್ರಗಳು	271	1
6	ಪ್ರಧಾನ ಗ್ರಾಮೀಣ ಯೋಜನೆಯ ಮುಖ್ಯ ಕೇಂದ್ರಗಳು	16	1
7	ಪ್ರಧಾನ ಗ್ರಾಮೀಣ ಯೋಜನೆಯ ಉಪ ಕೇಂದ್ರಗಳು	129	12
8	ಪ್ರಾದೇಶಿಕ ಪ್ರಯೋಗ ಶಾಲೆಗಳು	3	–
9	ತೀವ್ರ ತಳಿ ಅಭಿವೃದ್ಧಿ ಯೋಜನೆಯ ಉಪ ಕೇಂದ್ರಗಳು	17	–
10	ಕುರಿ ಮತ್ತು ಉಣ್ಣೆ ಅಭಿವೃದ್ಧಿ ವಿಸ್ತರಣಾ ಕೇಂದ್ರಗಳು	51	–
11	ಕುರಿ ಪೋಷಕರ ಸಂಘಗಳು	4	–
12	ಕುರಿ ಮತು ಉಣ್ಣೆ ಅಭಿವೃದ್ಧಿ ಯೋಜನೆಯ ಮುಖ್ಯ ಕೇಂದ್ರಗಳು	3	–
	ಒಟ್ಟು	**3876**	**76**

ಆ) ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ರಾಜ್ಯದಲ್ಲಿ ಒಟ್ಟು 837 ಪಶುವೈದ್ಯಾಧಿಗಳ ಹುದ್ದೆ ಖಾಲಿ ಇರುತ್ತವೆ. ಚಾಮರಾಜನಗರ ಜಿಲ್ಲೆಯಲ್ಲಿ 19 ಪಶುವೈದ್ಯಾಧಿಕಾರಿಗಳ ಹುದ್ದೆ ಭರ್ತಿಯಾಗಿರುತ್ತವೆ. 11 ಪಶುವೈದ್ಯಾಧಿಕಾರಿಗಳ ಹುದ್ದೆ ಖಾಲಿಯಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆ ಖಾಲಿ ಇರುವುದಿಲ್ಲ.

ಇ) ಸರ್ಕಾರದಿಂದ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಆಯವ್ಯಯದಲ್ಲಿ ನಿಗದಿಯಾದ ಅನುದಾನದಲ್ಲಿ ಸರಿಯಾದ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಈ) 2006–07ನೇ ಸಾಲಿನಲ್ಲಿ ಒಟ್ಟು 236 ಪಶುವೈದ್ಯರನ್ನು ನೇಮಿಸಿ ಆದೇಶ ನೀಡಿದೆ. 187 ಪಶುವೈದ್ಯರು ಸೇವೆಗೆ ಹಾಜರಾಗಿದ್ದಾರೆ ಇದಲ್ಲದೆ ಮುನಃ ಪಶುವೈದ್ಯರನ್ನು ನೇಮಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

582 (907) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯದ್ಯಂತ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲೆಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲಾಗುವುದು?

ಶ್ರೀ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ,ಆ,ಇ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

583 (908) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಾದ್ಯಂತ ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ಕಾರ್ಯ ನಿರ್ವಹಿಸುತ್ತಿರುವ ಹಾಸ್ಟಲ್‌ಗಳ ಸಂಖ್ಯೆ ಎಷ್ಟು;

ಆ) ಈ ಹಾಸ್ಟಲ್‌ಗಳಲ್ಲಿ ವಿದ್ಯಾರ್ಥಿಗಳ ಹಾಸ್ಟಲ್‌ಗಳೆಷ್ಟು ಹಾಗೂ ವಿದ್ಯಾರ್ಥಿನಿಯರ ಹಾಸ್ಟಲ್‌ಗಳೆಷ್ಟು;

ಇ) ವಸತಿ ನಿಲಯಗಳಲ್ಲಿನ ಕಡೆ ಹೊಸದಾಗಿ ವಸತಿ ನಿಲಯಗಳನ್ನು ತೆರೆಯುವ ಯೋಜನೆಯಾದರೂ ಇದೆಯೇ;

ಈ) ಹಾಗಿದ್ದಲ್ಲಿ ಯಾವಾಗ ತೆರೆಯಲಾಗುವುದು?